# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ರವರ ನ್ಯಾಯಾಲಯ, ಪಾಂಡವಪುರ

ಸಿ.ಸಿ. ನಂಬ್ರಃ **731/2019** ಸಿ.ಡಬ್ಲ್ಯೂಃ **5** ಪಿ.ಡಬ್ಲ್ಯೂಃ **3**

ಸಾಕ್ಷಿದಾರರ ಹೇಳಿಕೆಗಳು -

ಸಾಕ್ಷಿಯ ಹೆಸರು - ರಾಜಶೇಖರ್ ಕೆ ಪಿ

ತಂದೆಯ ಹೆಸರು - ಪುಷ್ಪರಾಜ್

ವಯಸ್ಸು - 43 ವರ್ಷ

ಉದ್ಯೋಗ - ಮುಖ್ಯ ಪೇದೆ, ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆ

ವಾಸ ಸ್ಥಳ - ಮಂಡ್ಯ

ದಿನಾಂಕಃ 17.04.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ ಮಾನ್ಯ ಸ.ಸ.ಅ.ರವರಿಂದಃ

ನಾನು ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಪೇದೆಯಾಗಿ 05.07.2017 ರಿಂದ 31.07.2019 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 13.07.2019 ರಂದು ನಾನು ರಾತ್ರಿ 9-00 ಗಂಟೆಯಲ್ಲಿ ಚಿನಕುರುಳಿ ಹೊರ ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಚಾಸಾ 1 ರವರಿಗೆ ಬಾತ್ಮಿದಾರರಿಂದ ಮೇಲುಕೋಟೆ ಮಿಲಿಟರಿ ಹೋಟೆಲ್ ನಲ್ಲಿ ಆರೋಪಿ ಅಕ್ರಮ ಮಧ್ಯ ಮಾರಾಟ ಮಾಡುತ್ತಿರುವ ಬಗ್ಗೆ ಚಾಸಾ 1 ರವರಿಗೆ ಮಾಹಿತಿ ಬಂದಿರುತ್ತದೆ ನಂತರ ಸದರಿ ಮಾಹಿತಿಯ ಆಧಾರದ ಮೇಲೆ ಚಾಸಾ 1, ನಾನು ಮತ್ತು ಚಾಸಾ-4, 6 ರಿಂದ 10 ರವರೊಂದಿಗೆ ಹಾಗೂ ನಮ್ಮ ಇಲಾಖಾ ವಾಹನದಲ್ಲಿ ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ರಾತ್ರಿ 9-00 ಗಂಟೆಗೆ ಹೋಟೆಲ್ ಬಳಿ ಹೋಗಿರುತ್ತೇವೆ.

ನಂತರ ಸ್ಥಳದಲ್ಲಿ ಒಬ್ಬ ವ್ಯಕ್ತಿ ನಮ್ಮನ್ನು ನೋಡಿ ಹೋಗಿರುತ್ತಾರೆ. ಸದರಿ ವ್ಯಕ್ತಿಯ ಬಗ್ಗೆ ವಿಚಾರಣೆ ಮಾಡಲಾಗಿ ಅವರ ಹೆಸರು ಮಹೇಶ್ ಅಲಿಯಾಸ್ ಶ್ರೀಧರ್ ಬಿನ್ ಜವರೇಗೌಡ

ಎಂದು ತಿಳಿದು ಬಂದಿರುತ್ತದೆ. ಸದರಿ ಸಮಯದಲ್ಲಿ ಹೋಟೆಲ್ ಮುಂಭಾಗ ಪರಿಶೀಲಿಸಿದಾಗ ಸದರಿ ಸ್ಥಳದಲ್ಲಿ ಒಂದು ಪ್ಲಾಸ್ಟಿಕ್ ಚೀಲದಲ್ಲಿ

1. 180 ml Old Tavaren Whisky -15 pouches
2. 180 ml 8PM Whisky – 5 pouches
3. 180ml Bag Piper Whisky – 10 pouches
4. 180 ml Raja Whisky – 12 pouches
5. 90ml Mc. Dowells Brandy – 7 pouches ಕಂಡುಬಂದಿದ್ದು,

ಒಟ್ಟಾಗಿ ಎಲ್ಲಾ ಮಧ್ಯದ ಪ್ಯಾಕೇಟುಗಳು ಮಧ್ಯವು 8.190 ಲೀಟರಗಳಿದ್ದವು. ಅವುಗಳಲ್ಲಿ ಕ್ರ ಸಂ 1 ರಿಂದ 5 ಪೋಚುಗಳಲ್ಲಿ ತಲಾ 4 ಪೋಚುಗಳಂತೆ ಎಫ್ ಎಸ್ ಎಲ್ ಗಾಗಿ ಪ್ರತ್ಯೇಕಿಸಿದ್ದು ಬಿಳಿಯ ಬಟ್ಟೆಯಲ್ಲಿ ಸುತ್ತಿ ಅರಗು ಸೀಲನ್ನು ಹಾಕಿ ಎಲ್ಲಾ ಮಧ್ಯದ ಪ್ಯಾಕೇಟುಗಳನ್ನು ರಾತ್ರಿ 9-30 ರಿಂದ 10-30 ಗಂಟೆಯವರೆಗೆ ಮಹಜರ ಕ್ರಮ ಮಾಡಿ, ಎಲ್ಲಾ ಮಧ್ಯದ ಪ್ಯಾಕೇಟುಗಳನ್ನು ಅಮಾನತುಪಡಿಸಿಕೊಳ್ಳಲಾಯಿತು. ಸಾಕ್ಷಿಯು ಈಗಾಗಲೇ ಗುರುತಿಸಲಾದ ನಿಪಿ-1 ಮಹಜರನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ-1 ಸಿ ಎಂದು ಗುರುತಿಸಲಾಯಿತು. ನಂತರ ಚಾಸಾ 1 ರವರು ಅಮಾನತು ಪಡಿಸಿಕೊಂಡ ಮಾಲುಗಳ ಸಮೇತ ಹೊರ ಠಾಣೆಗೆ ಹಾಜರಾಗಿ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವರದಿಯನ್ನು ತಯಾರು ಮಾಡಿರುತ್ತಾರೆ.

ನ್ಯಾಯಾಲಯದಲ್ಲಿ ಬಿಳಿಯ ಬಟ್ಟೆಯಲ್ಲಿ ಸುತ್ತಿ, ಎಫ್ ಎಸ್ ಎಲ್ ಅರಗು ಸೀಲು ಆಗಿರುವ 20 ಮಧ್ಯದ ಪೋಚುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.-1 ರಿಂದ ಮು.ಮಾ.20 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು ಆರೋಪಿ ಪರ ಶ್ರೀ ಕೆ ಎಂ ವಕೀಲರಿಂದಃ</u>

ನಾನು ಘಟನೆಯ ದಿನದಂದು ಹಗಲು ಕರ್ತವ್ಯಕ್ಕೆಂದು ಚೆನಕುರುಳಿ ಹೊರ ಠಾಣೆಗೆ ಹೋಗಿರುತ್ತೇನೆ. ಘಟನಾ ಸ್ಥಳವು ಕೂಗಳತೆ ಯ ದೂರದಲ್ಲಿರುತ್ತದೆ ಎಂದರೆ ಸರಿಯಲ್ಲ. ಘಟನಾ ಸ್ಥಳವು ಒಂದು ಕಿ.ಮೀ. ಅಂತರದಲ್ಲಿರುತ್ತದೆ. ಘಟನಾ ಸ್ಥಳವು ಹೊರ ಠಾಣೆಯಿಂದ

ಉತ್ತರ ದಿಕ್ಕಿಗೆ ಇರುತ್ತದೆ ಎಂದರೆ ನನಗೆ ನೆನಪಿಲ್ಲ. ಗಣಪತಿ ದೇವಸ್ಥಾನ ಸಿಕ್ಕಿದ ನಂತರ ಹೊರ ಠಾಣೆ ಸಿಗುತ್ತದೆ ತದನಂತರ ಘಟನಾ ಸ್ಥಳ ಸಿಗುತ್ತದೆ ಎಂದರೆ ಸರಿ. ಘಟನಾ ಸ್ಥಳದಲ್ಲಿ ಜನ ಸಂದಣಿ ಇರುತ್ತದೆ ಎಂದರೆ ಸರಿ. ಘಟನಾ ಸ್ಥಳದಲ್ಲಿ ಆರೋಪಿಯನ್ನು ಹಿಡಿಯಲು ಪ್ರಯತ್ನಿಸಿದೇವು ಆದರೆ ಆರೋಪಿಯು ಓಡಿ ಹೋಗಿರುತ್ತಾನೆ. ಘಟನಾ ಸ್ಥಳಕ್ಕೆ ಮುಖ್ಯ ರಸ್ತೆಯು ಒಂದೇ ಇರುತ್ತದೆ ಬೇರೆ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಸಂದಿ ರಸ್ತೆಯಲ್ಲಿ ಓಡಿ ಹೋಗಿರುತ್ತಾರೆಂದು ಹೇಳಿಕೆಯಲ್ಲಿ ಹೇಳಿರುವ ಬಗ್ಗೆ ನನಗೆ ನೆನಪಿಲ್ಲ. ಘಟನಾ ಸ್ಥಳದಲ್ಲಿ ಘಟನೆಯ ಸಮಯದಲ್ಲಿ ಬೇರೆ ವ್ಯಕ್ತಿಗಳು ಇದ್ದರು ಎಂದರೆ ನನಗೆ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಮದ್ಯದ ಬಾಟೆಲ್ ಗಳು ಹೋಟೆಲ್‌ನ ಒಳಗಡೆ ಇರುತ್ತದೆ. ಘಟನಾ ಸ್ಥಳದಲ್ಲಿ ಖಾಲಿ ಪೋಚುಗಳನ್ನು ಜಪ್ತಿ ಮಾಡಿರುವುದಿಲ್ಲ. ನಿಪಿ-1 ರಲ್ಲಿ ನಾನು ಅಮಾನತುಪಡಿಸಿಕೊಂಡ ಮಾಲುಗಳ ಸಂಖ್ಯೆ , ಬ್ಯಾಚ್ ನಂಬರ್ ಹಾಗೂ ತಯಾರಿಕಾ ದಿನಾಂಕಗಳನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾವು ಮಹಜರ್ ನ್ನು ಘಟನಾ ಸ್ಥಳದಲ್ಲಿ ಮಾಡಿರುತ್ತೇವೆ. ನಿಪಿ-1 ಮಹಜರ್ ನಲ್ಲಿ ಸಾರ್ವಜನಿಕ ರಸ್ತೆ ಅಂಗಡಿ ಮುಂಭಾಗ ಎಂದು ನಮುದಾಗಿರುತ್ತದೆ ಎಂದರೆ ಸರಿ.

ಆರೋಪಿಯು ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿರಲಿಲ್ಲ. ಮು.ಮಾ 1 ರಿಂದ 20 ಕ್ಕೂ ಆರೋಪಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಅಮಾನತುಪಡಿಸಿಕೊಂಡ ಎಲ್ಲಾ ಮಾಲುಗಳಲ್ಲಿ ವೈಜ್ಞಾನಿಕ ಪರೀಕ್ಷೆಗಾಗಿ ಮಾದರಿಯನ್ನು ತೆಗೆದು ಕಳುಹಿಸಿಕೊಟ್ಟಿರುವುದಿಲ್ಲ ಎಂದರೆ ಸರಿ. ಅಂಕಿ ಅಂಶಗಳಿಗಾಗಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ಹೋಟೆಲ್ ಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ ಎಂದರು

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ನ್ಯಾಯಾಲಯ, ಪಾಂಡವಪುರ